**ದಿಃ 26-03-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲೆ ಆದ ಆದೇಶದ ಮೇರೆಗೆ ಸಾಕ್ಷಿಯ **ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ** ಎ ಎಸ್ ಎಚ್ **ವಕೀಲರಿಂದ**

ನಾನು ಈ ದಿನ ಮೋಟಾರು ವಾಹನ ಪರೀಕ್ಷಕರ ವರದಿಯ ದೃಢೀಕೃತ ಪ್ರತಿ ಹಾಜರುಪಡಿಸುತ್ತಿದ್ದು, ಅದನ್ನು ನಿಪಿ-19 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 2ನೇ ಎದುರುದಾರರ ಪರವಾಗಿ ಶ್ರೀ** ಕೆ ಜಿ ಬಿ **ವಕೀಲರಿಂದ**

ನಾನು ಪ್ರಯಾಣಿಸುತ್ತಿದ್ದ ಕಾರು ನನ್ನ ತಂದೆಯವರ ಮಾಲೀಕತ್ವದಲ್ಲಿದೆ. ಅಪಘಾತವಾದ ದಿವಸ ನಾನು ಮಂಗಳೂರು ಏರ್ ಪೋರ್ಟಿನಿಂದ ನಮ್ಮ ಮನೆ ಬೈಂದೂರಿಗೆ ಪ್ರಯಾಣ ಮಾಡುತ್ತಿದ್ದೆವು. ಮಂಗಳೂರಿನಿಂದ ಬೆಳಗಿನ ಜಾವ 3.30 ಗಂಟೆಗೆ ಹೊರಟಿದ್ದೆವು. ಅಪಘಾತ ಬೆಳಗಿನ ಜಾವ 5.30 ಗಂಟೆಗೆ ಆಗಿರುತ್ತದೆ. ಅಪಘಾತ ಆಗಿದ್ದು ಬ್ರಹ್ಮಾವರದ ಎಸ್ ಎಂ ಎಸ್ ಶಾಲೆಯ ಹತ್ತಿರ. ಮಂಗಳೂರು ಏರ್ ಪೋರ್ಟಿನಿಂದ ಅಪಘಾತ ಆಗಿದೆ ಅಂತ ಹೇಳುವ ಸ್ಥಳ ಎಸ್ ಎಂ ಎಸ್ ಶಾಲೆ ಸುಮಾರು 75 ಕಿ.ಮೀ. ಇದೆ ಎಂದರೆ ಸರಿ. ಕಾರನ್ನು ಪ್ರಥ್ವಿ ಮಲ್ಯಾ ಎನ್ನುವ ವ್ಯಕ್ತಿ ಚಲಾಯಿಸುತ್ತಿದ್ದ. ಕಾರಿನಲ್ಲಿ ನಾನು, ನನ್ನ ತಂದೆ, ನನ್ನ ಇಬ್ಬರು ಮಕ್ಕಳು ಮತ್ತು ವಿದೇಶಕ್ಕೆ ಹೋದ ನನ್ನ ತಂಗಿ ಜೆಸಿಂತಾಳ ಮಗಳು ಇದ್ದೆವು. ನಾನು ಹಿಂದುಗಡೆ ಸೀಟಿನಲ್ಲಿ ಕುಳಿತುಕೊಂಡಿದ್ದೆನು. ಬೆಳಗಿನ ಜಾವ ಕತ್ತಲೆಯಿತ್ತು ಎಂದರೆ ಸಾಕ್ಷಿ ರಸ್ತೆಯಲ್ಲಿ ದೀಪದ ಬೆಳಕುಗಳು ಇದ್ದವು ಎಂದು ನುಡಿಯುತ್ತಾರೆ. ಅಪಘಾತ ವಾಹನ ಬಿದ್ದ ನಂತರ ನನಗೆ ಗೊತ್ತಾಯಿತು ಎಂದರೆ ಸಾಕ್ಷಿ ಸರಿ ಅಲ್ಲಾ, ಆ ಸಮಯದಲ್ಲಿ ನಾನು ಎಚ್ಚರ ಇದ್ದೆ ಅಂತ ಸಾಕ್ಷಿ ನುಡಿಯುತ್ತಾರೆ. ವಾಹನ ಎಷ್ಟು ಕಿ.ಮೀ. ವೇಗದಲ್ಲಿ ಹೋಗುತ್ತಿತ್ತು ಅಂತ ನಾನು ಗಮನಿಸಿಲ್ಲ ಆದರೆ ವಾಹನ ವೇಗವಾಗಿ ಚಲಿಸುತ್ತಿತ್ತು. ರಸ್ತೆಯಲ್ಲಿ ನಾಯಿ ಅಡ್ಡ ಬರುವುದನ್ನು ನೋಡಿ ನಮ್ಮ ವಾಹನ ಚಾಲಕ ಬ್ರೇಕ್ ಹಾಕಿದ್ದು ವಾಹನವನ್ನು ವೇಗವಾಗಿ ಚಲಾಯಿಸುತ್ತಿದ್ದುದರಿಂದ ನಿಯಂತ್ರಣ ತಪ್ಪಿ ಕಾರು ಮಗುಚಿ ಬಿತ್ತು. ಅಡ್ಡ ಬಂದ ನಾಯಿಗೆ ತಪ್ಪಿಸಲು ವಾಹನ ಚಾಲಕ ಬ್ರೇಕ್ ಹಾಕಿದ್ದರಿಂದ ಅಪಘಾತ ಆಯಿತು ಎಂದರೆ ಸಾಕ್ಷಿ ಬ್ರೇಕ್ ಹಾಕಿದ್ದರಿಂದ ಅಪಘಾತ

ಆಯಿತು ಬಾಕಿ ವಿಷಯ ನನಗೆ ಗೊತ್ತಿಲ್ಲ ಅಂತ ನುಡಿಯುತ್ತಾರೆ. ನಮ್ಮ ವಾಹನ ಚಾಲಕ ವಾಹನವನ್ನು ಅತೀ ವೇಗವಾಗಿ ಚಲಾಯಿಸುತ್ತಿರಲಿಲ್ಲ ಎಂದರೆ ಸರಿ ಅಲ್ಲಾ.

ನನ್ನ ಬಲಕೈಯ ಮೂರು ಬೆರಳುಗಳು ತುಂಡಾಗಿದ್ದವು. ಮತ್ತು ಉಳಿದಂತಹಾ ಬೆರಳು ಸಹಾ ರೋಡಿನಿಂದ ಜೋಡಣೆ ಮಾಡಿದ್ದು ಅದರಿಂದ ಯಾವುದೇ ಚಲನ ವಲನ ಮಾಡಲು ಸಾಧ್ಯವಿಲ್ಲ. ನಾನು ಒಂದು ಬಾರಿ ಒಳರೋಗಿಯಾಗಿದ್ದು, ಒಟ್ಟು 38 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ನಾನು ಚಿಕಿತ್ಸೆ ಪಡೆದುಕೊಂಡಂತಹಾ ಎಲ್ಲಾ ಬಿಲ್ಲುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಕೆಲವೊಂದು ಬಿಲ್ಲುಗಳು ನನ್ನ ತಂದೆ ಹತ್ತಿರ ಇದ್ದಿದ್ದು ನನ್ನ ಹತ್ತಿರ ಇದ್ದ ಬಿಲ್ಲುಗಳನ್ನು ಮಾತ್ರ ಹಾಜರುಪಡಿಸಿದ್ದೇನೆ ಅಂತ ನುಡಿಯುತ್ತಾರೆ. ಆ ಬಿಲ್ಲುಗಳನ್ನು ನನಗೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲಾ. ಯಾವ ಮೊತ್ತದ ಬಿಲ್ಲುಗಳು ಮತ್ತು ಯಾವ ವೈದ್ಯರು ನೀಡಿದಂತಹಾ ಬಿಲ್ಲು ಕಳೆದು ಹೋಗಿದೆ ಅಂತ ನನಗೆ ಹೇಳಲಿಕ್ಕೆ ಬರುವುದಿಲ್ಲ.

ಜಯರಾಜ್ ಟೂರ್ ಆ್ಯಂಡ್ ಟ್ರಾವೆಲ್ಸ ರವರ ವಾಹನವನ್ನು ನಾನು ಚಿಕಿತ್ಸೆಗೆ ಹೋಗಲು ಉಪಯೋಗಿಸಿದ್ದು, ಆ ಬಗ್ಗೆ ನಾನು ನಿಪಿ-8 ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ. ನಿಪಿ-8 ರಲ್ಲಿ ಕಾಣಿಸಿದ ಬಾಡಿಗೆ ಹಣವನ್ನು ಪಾವತಿಸಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ನಾನು ನಗದು ಹಣ ನೀಡಿದ್ದೇನೆ ಅಂತ ನುಡಿಯುತ್ತಾರೆ. ನಿಪಿ-8 ಬಿಲ್ಲುಗಳನ್ನು ನೀಡಿದ ವ್ಯಕ್ತಿಯನ್ನು ನ್ಯಾಯಾಲಯಕ್ಕೆ ಕರೆಸಿ ಅವರ ವಿಚಾರಣೆ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ. ನಿಪಿ-8 ಬಿಲ್ಲನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿ ಅಲ್ಲಾ. ನಾನು ನಿಪಿ-8 ನೀಡಿದ ವ್ಯಕ್ತಿಯ 2 – 3 ವಾಹನಗಳಲ್ಲಿ ಪ್ರಯಾಣ ಮಾಡಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಷ್ಟು ನನ್ನ ಊಟೋಪಚಾರಕ್ಕೆ ಮತ್ತು ಪರಿಚಾರಕರಿಗೆ ಹಣ ಖರ್ಚು ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲಾ.

ಕಳವಾಡಿ ಮಾತೃಭೂಮಿ ಗೆಸ್ಟ ಹೌಸ್ ಇದು ಮಹಾಬಲ ಎನ್ನುವವರಿಗೆ ಸೇರಿದ್ದು. ಸದ್ರಿ ಗೆಸ್ಟ ಹೌಸ್‌ನಲ್ಲಿ ಅವರು ನನ್ನನ್ನು ಅಡುಗೆ ಮಾಡಲು ನೇಮಿಸಿದ ಬಗ್ಗೆ ದಾಖಲಾತಿ ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು 2017 ರಲ್ಲೇ ಟೈಲರಿಂಗ್ ಕೆಲಸ ಕಲಿತ್ತಿದ್ದೆ. ನಾನು ಮನೆಯಲ್ಲೇ ಟೈಲರಿಂಗ್ ಕೆಲಸ ಮಾಡುತ್ತೇನೆ ಯಾವುದೇ ಅಂಗಡಿ ಇಟ್ಟುಕೊಂಡಿಲ್ಲ. ನಾನು ಟೈಲರಿಂಗ್ ಮೆಶಿನ್ ತೆಗೆದುಕೊಂಡ ಬಗ್ಗೆ

ದಾಖಲಾತಿ ಇಲ್ಲಾ. ನಾನು ಟೈಲರಿಂಗ್ ಮಾಡಿ ಅದರಿಂದ ಹಣ ಗಳಿಸಿದ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ಎಂ.ಐ. ಲೈಫ್ ಸ್ಟೈಲ್ ಮಾರ್ಕೆಟಿಂಗ್ ಅದು ಆರೋಗ್ಯ ಮತ್ತು ಕೃಷಿ ಉಪಯೋಗಿ ವಸ್ತುಗಳ ಮಾರಾಟ ಮಾಡುವ ಸಂಸ್ಥೆಯಾಗಿದೆ. ಸದ್ರಿ ಸಂಸ್ಥೆಯಲ್ಲಿ ನನ್ನನ್ನು ಸೇಲ್ಸಮೆನ್ ಆಗಿ ನೇಮಿಸಿಕೊಂಡ ಬಗ್ಗೆ ನಾನು ದಾಖಲಾತಿ ಹಾಜರುಪಡಿಸಿದ್ದೇನೆ. ಸದ್ರಿ ಕಂಪೆನಿಯಲ್ಲಿ ಸೇಲ್ಸಮೆನ್ ಆಗಿ ಕೆಲಸ ಮಾಡಿದಾಗ ನನಗೆ ಬರುವಂತಹಾ ಕಮೀಷನ್ ನ್ನು ಕಂಪೆನಿಯವರು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತಾರೆ. ಬೈಂದೂರು ಯೂನಿಯನ್ ಬ್ಯಾಂಕ್‌ನಲ್ಲಿ ನನ್ನ ಖಾತೆಯಿದ್ದು, ಕಂಪೆನಿಯವರು ಆ ಬ್ಯಾಂಕ್ ಖಾತೆಗೆ ಹಣವನ್ನು ಜಮೆ ಮಾಡುತ್ತಾರೆ. ಆ ಬ್ಯಾಂಕಿನ ಪಾಸ್ ಪುಸ್ತಕವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದ್ರಿ ಸೇಲ್ಸಮೆನ್ ಕೆಲಸಕ್ಕೆ ನೀವು ರಾಜೀನಾಮೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ರಾಜೀನಾಮೆ ಕೊಟ್ಟಿಲ್ಲ, ನಾನು ಸೇಲ್ಸ ಮಾಡಿದರೆ ಮಾತ್ರ ನನ್ನ ಕಮೀಷನ್ ನನಗೆ ಜಮೆ ಆಗುತ್ತದೆ ಅಂತ ನುಡಿಯುತ್ತಾರೆ. ಕಂಪೆನಿಯವರು ನನಗೆ ಸೇಲ್ಸಮೆನ್ ಕೆಲಸದಿಂದ ತೆಗೆದು ಹಾಕಿಲ್ಲ. ನಾನು ಈಗಲೂ ಸಹಾ ಸದ್ರಿ ಕಂಪೆನಿಯಲ್ಲಿ ಸೇಲ್ಸಮೆನ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ ಅಲ್ಲಾ.

ನಾನು ಹಾಜರುಪಡಿಸಿದ ಆದಾಯ ತೆರಿಗೆ ಪಾವತಿಯ ದಾಖಲಾತಿಯಲ್ಲಿ ಟೈಲರಿಂಗ್ ಮತ್ತು ಎಂ.ಐ. ಲೈಫ್ ಸ್ಟೈಲ್ ಮಾರ್ಕೆಟಿಂಗ್ ನಿಂದ ಬಂದಂತಹಾ ಆದಾಯ ಮಾತ್ರ ನಾನು ತೋರಿಸಿದ್ದೇನೆ. ಟೈಲರಿಂಗ್ ಮತ್ತು ಎಂ.ಐ. ಲೈಫ್ ಸ್ಟೈಲ್ ಮಾರ್ಕೆಟಿಂಗ್ ನಿಂದ ನನಗೆ ಬಂದ ಆದಾಯ ಮತ್ತು ಕಮೀಷನ್ ಬಗ್ಗೆ ಪ್ರತ್ಯೇಕವಾಗಿ ದಾಖಲಾತಿಯನ್ನು ನಾನು ಆದಾಯ ತೆರಿಗೆ ಕಚೇರಿಗೆ ನೀಡಿಲ್ಲ. ನನಗೆ ಟೈಲರಿಂಗ್ ನಿಂದ ಆದಾಯ ಬರುತ್ತದೆ ಅಂತ ನಾನು ಅಂದಾಜಿನ ಮೇಲೆ ಹೇಳಿದ್ದೇನೆ ಎಂದರೆ ಸರಿ. ಅಪಘಾತ ಆದ ನಂತರ ನೀವು ಆದಾಯ ತೆರಿಗೆ ಪಾವತಿಸಿದ್ದೀರಾ ಎಂದರೆ ಸಾಕ್ಷಿ ನನಗೆ ಆದಾಯ ಇರಲಿಲ್ಲ ಆದ್ದರಿಂದ ಪಾವತಿಸಿಲ್ಲ ಅಂತ ನುಡಿಯುತ್ತಾರೆ. ಈಗಲೂ ಸಹಾ ನಾನು ಆದಾಯ ತೆರಿಗೆಯಲ್ಲಿ ಕಾಣಿಸಿದಂತಹಾ ಉದ್ಯೋಗಗಳನ್ನು ಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿ ಅಲ್ಲಾ. ನಿಮ್ಮ ಹತ್ತಿರ ಇದ್ದ ಟೈಲರಿಂಗ್ ಮೆಶಿನ್ ಮಾರಾಟ ಮಾಡಿದ್ದೀರಾ ಎಂದರೆ ಸಾಕ್ಷಿ ಟೈಲರಿಂಗ್ ಮೆಶಿನ್ ಮಾರಾಟ ಮಾಡಿಲ್ಲ ಅದು ಈಗಲೂ ಸಹಾ ನನ್ನ ಬಳಿ ಇದೆ ಅಂತ ನುಡಿಯುತ್ತಾರೆ. ನನ್ನ ಮುಖ್ಯ

ವಿಚಾರಣೆಯಲ್ಲಿ ಹೇಳಿದಷ್ಟು ತೊಂದರೆ ನನಗೆ ಆಗಿಲ್ಲ ಎಂದರೆ ಸರಿ ಅಲ್ಲಾ. ನಾನು ಪ್ರಕರಣಕ್ಕೆ ಅನುಕೂಲವಾಗುವಂತೆ ದಾಖಲಾತಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಕೊನೆಯ ಬಾರಿಗೆ ಹೋದ ವರ್ಷ ಅಕ್ಟೋಬರ್ ತಿಂಗಳಿನಲ್ಲಿ ಡಾಃ ಶಿವ ಕುಮಾರ್ ವೈದ್ಯರಲ್ಲಿಗೆ ಚಿಕಿತ್ಸೆಗೆ ಹೋಗಿದ್ದೆ. ನಾನು ನನ್ನ ಅರ್ಜಿಯಲ್ಲಿ ಕಾಣಿಸಿದಷ್ಟು ದೈಹಿಕ ನ್ಯೂನ್ಯತೆ ನನಗೆ ಆಗಿಲ್ಲ ಎಂದರೆ ಸರಿ ಅಲ್ಲಾ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**